ಓ.ಎಸ್. ನಂ. 26/2016
ಪಿ.ಡಬ್ಲ್ಯೂ- 2

(ಇಂದು ದಿಃ 04-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಪಾಟೀ ಸವಾಲು **:- 1, 2** ಮತ್ತು **4** ನೇ ಪ್ರತಿವಾದಿಯರ ಪರ ಶ್ರೀ.**N.R.** ವಕೀಲರಿಂದ **:-**

ಮೂಲವಾದಿ ಸಿದ್ದಣ್ಣ ನನ್ನ ತಂದೆ. ದಾವಾ ಸ್ವತ್ತು ಮುಂಚೆ ಸಾಬಣ್ಣ ತಂದೆ ಸಿದ್ದಣ್ಣ ಯದ್ಲಾಪುರ ರವರ ಹೆಸರಿನಲ್ಲಿತ್ತು. ಮೂಲವಾದಿ ಸಿದ್ದಣ್ಣ ಸಾಬಣ್ಣನ ಮಗ. ನಮ್ಮ ಸರ್ ನೇಮ ಮತ್ತು ಸಾಬಣ್ಣನ ಸರ್ ನೇಮ ಹೊನ್ನಾಯಕ ಎಂದರೆ ಸರಿ. ಯದ್ಲಾಪುರ ಗ್ರಾಮದ ಹೆಸರು. ಯದ್ಲಾಪುರದಲ್ಲಿ ನಮ್ಮ ಜಮೀನು ಇತ್ತು. ಅದನ್ನು ನನ್ನ ತಂದೆಯ ತಾಯಿಯ ತಮ್ಮನಿಗೆ ಕೊಟ್ಟಿದ್ದೇವೆ. ಸದರಿ ಸ್ವತ್ತುಗಳು ನನ್ನ ತಂದೆಯ ತಾಯಿ ಬಸಮ್ಮನ ಸ್ವತ್ತುಗಳು. ಕೊಡ್ಲಾದಲ್ಲಿರುವ ಮನೆ ನಂಬರ ಹೇಳಲು ಆಗುವುದಿಲ್ಲ. ಸದರಿ ಮನೆಗೆ ಚೆಕಬಂದಿ ಪೂರ್ವಕ್ಕೆ ಸಾಬಣ್ಣ ಹೊನ್ನಾಯಾಕ, ಪಶ್ಚಿಮಕ್ಕೆ ಹಳ್ಳಿ ಸೀದರವರ ಸ್ವತ್ತು, ಉತ್ತರಕ್ಕೆ ಶಾಂತಪ್ಪ ರವರ ಸ್ವತ್ತು, ದಕ್ಷಿಣಕ್ಕೆ ಸಾಬಣ್ಣ ಹೊನ್ನಾಯಕ ರವರ ಮನೆ. ಸಾಬಣ್ಣ ಹೊನ್ನಾಯಕ ಮತ್ತು ನಮ್ಮ ಮನೆಯ ಗೊಡೆ ಜಂಟಿ ಗೊಡೆ ಎಂದರೆ ಸರಿಯಲ್ಲ. ಇಬ್ಬರ ಮನೆಗಳ ನಡುವೆ ರಸ್ತೆ ಇದೆ. ನಮ್ಮಿಬ್ಬರ ಮನೆಗಳ ನಡುವೆ ಗಲ್ಲಿ ಇಲ್ಲ. ಎರಡು ಮನೆಗಳಿಗೆ ಒಂದೇ ನಂಬರ ಎಂದರೆ ಸರಿಯಲ್ಲ. ಸದರಿ ಮನೆ ನನ್ನ ತಂದೆ ಹೆಸರಿನಲ್ಲಿದೆ.

ಮಾಣಿಕಮ್ಮ ನನ್ನ ಹೆಂಡತಿ. ಕಾಶಪ್ಪ ತಂದೆ ಭೀಮಣ್ಣ ನನಗೆ ಗೊತ್ತಿಲ್ಲ. ದ್ಯಾವಣ್ಣ ತಂದೆ ಸಾಬಣ್ಣ ನನಗೆ ಗೊತ್ತಿಲ್ಲ. ಕಮಲಮ್ಮ ಗಂಡ ಭೀಮಣ್ಣ ನನಗೆ ಗೋತ್ತಿಲ್ಲ. ಶ್ರೀದೇವಿ ಗಂಡ ಸಾಬಣ್ಣ ನನಗೆ ಗೊತ್ತಿಲ್ಲ. ದೇವಕಮ್ಮ ಗಂಡ ಮಹಾದೇವಪ್ಪ ನನಗೆ ಗೊತ್ತಿಲ್ಲ. ಆಶಪ್ಪ ತಂದೆ ದ್ಯಾವಪ್ಪ ನನಗೆ ಗೊತ್ತಿಲ್ಲ. ನಾಗಮ್ಮ ಗಂಡ ಪರಶುರಾಮ ನನಗೆ ಗೊತ್ತಿಲ್ಲ. ಶರಣಮ್ಮ ಗಂಡ ಕಾಶಪ್ಪ ನನಗೆ ಗೊತ್ತಿಲ್ಲ. ಕಾಶಮ್ಮ ಗಂಡ ಕಾಶಪ್ಪ ನನಗೆ ಗೊತ್ತಿಲ್ಲ. ನಮ್ಮ ಮನೆ ನಂಬರ ಮತ್ತು ಅವರ ಮನೆ ನಂಬರ ಮತದಾರರ ಯಾದಿಯಲ್ಲಿ 10-44 ಇದೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಮನೆ ನಂಬರ 10-44/1 ಮತ್ತು ಅವರ ಮನೆಗೆ 10-44/2 ಎಂದು ತೋರಿಸಿದ್ದಾರೆ ಎಂದರೆ ಸರಿಯಲ್ಲ. ಮೇಲಿನ ವ್ಯಕ್ತಿಗಳ ಸರ್ ನೇಮ ಹೊನ್ನಾಯಕ ಎಂದರೆ ಸರಿಯಲ್ಲ. ಅವರೆಲ್ಲ ಸಾಬಣ್ಣ ತಂದೆ ಕಾಶಪ್ಪನ ವಾರಸುದಾರರು ಎಂದರೆ ಸರಿಯಲ್ಲ. ನಮ್ಮ ಮನೆ ಪಕ್ಕದಲ್ಲಿ ಕಾಶಪ್ಪನ ಮನೆ ಇದೆ. ಆತನ ತಂದೆ ಹೆಸರು ನನಗೆ ಗೊತ್ತಿಲ್ಲ. ದ್ಯಾವಣ್ಣನ ತಂದೆ ಹೆಸರು ನನಗೆ ಗೊತ್ತಿಲ್ಲ. ನನ್ನ ಮನೆ ಪಕ್ಕದಲ್ಲಿ ದ್ಯಾವಣ್ಣ ತಂದೆ ಸಾಬಣ್ಣ ವಾಸ ಇದ್ದಾರೆ ಎಂದರೆ ಸರಿಯಲ್ಲ. ದ್ಯಾವಣ್ಣ ತಂದೆ ಸಾಬಣ್ಣ ಮತ್ತು ದ್ಯಾವಣ್ಣನ ತಾತನ ಹೆಸರು

ಕಾಶಪ್ಪ ಎಂದರೆ ಸರಿಯಲ್ಲ. ಸಾಬಣ್ಣನಿಗೆ 6 1/2 ಎಕರೆ ಒಂದೇ ಜಮೀನು ಇತ್ತು. ಅದರ ಪಕ್ಕದಲ್ಲಿ 2 ಎಕರೆ ಇದೆ. ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ನಮ್ಮ ಗ್ರಾಮದಲ್ಲಿ ಒಬ್ಬನೇ ವ್ಯಕ್ತಿ ಎಂದರೆ ಸರಿಯಲ್ಲ. ಹೊನ್ನಾಯಕ ಎಂದರೆ ಒಂದೇ ಕುಟುಂಬ ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ಇತನಿಗೆ ಸರ್ವೆ ನಂ. 238 ರಲ್ಲಿ ಜಮೀನು ಇತ್ತು ಎಂದರೆ ಸರಿಯಲ್ಲ. ನಮ್ಮ ಮನೆ ಪೂರ್ವದಲ್ಲಿ ಮನೆ ಹೊಂದಿರುವ ಕಾಶಪ್ಪ ಹೊನ್ನಾಯಕ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ರವರ ವಾರಸುದಾರರು ಎಂದರೆ ಸರಿಯಲ್ಲ.

ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ, ಹಿರಿಯ ಹೆಂಡತಿ ಲಕ್ಷ್ಮಮ್ಮ, 2 ನೇ ಹೆಂಡತಿ ಬಸಮ್ಮ ಎಂದರೆ ಸರಿಯಲ್ಲ. ಅವರಿಬ್ಬರು ಒಂದೇ ಮನೆಯಲ್ಲಿ ಭಾಗ ಮಾಡಿಕೊಂಡು ಅಕ್ಕ-ಪಕ್ಕದಲ್ಲಿ ಪ್ರತ್ಯೇಕವಾಗಿ ವಾಸ ಇದ್ದರು ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ 1976 ರ ಯುಗಾದಿ ಕಳೆದ 3 ನೇ ದಿನಕ್ಕೆ ರಲ್ಲಿ ಪರ್ವತರೆಡ್ಡಿ ರವರ ತಂದೆ ತಿಪ್ಪಣ್ಣರವರಿಗೆ ದಾವಾ ಜಮೀನಿನ ಪೈಕಿ 6 ಎಕರೆ 19 ಗುಂಟೆ ಜಮೀನ್ನು ರೂ. 6,000/- ಗಳಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ರವರ 2 ನೇ ಹೆಂಡತಿ ಬಸಮ್ಮಳ ಮಗ ಎಂದರೆ ಸರಿಯಲ್ಲ. ಲಕ್ಷ್ಮಮ್ಮಳಿಗೆ ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ 3 ಜನ ಮಕ್ಕಳು ಎಂದರೆ ಸರಿಯಲ್ಲ. ನಮ್ಮ ಮನೆ ಪೂರ್ವದ ಕಾಶಪ್ಪ ಹೊನ್ನಾಯಕ ರವರ ತಂದೆ ಹೆಸರು ಭೀಮಣ್ಣ ಎಂದರೆ ಸರಿಯಲ್ಲ. ಭೀಮಣ್ಣನಿಗೆ ಭೀವಶ್ಯಾ ಎಂದು ಕೂಡ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದ್ಯಾವಪ್ಪ ಮತ್ತು ಭೀಮಣ್ಣ ಗ್ರಾಮ ಲೆಕ್ಕಾಧಿಕಾರಿಗೆ ಅರ್ಜಿ ಕೊಟ್ಟು ನನ್ನ ತಂದೆ ಮಾರಾಟ ಮಾಡಿದಂತೆ ಮುಟೇಷನ ಮಾಡುವಂತೆ ಕೇಳಿಕೊಂಡು ಎಂದರೆ ಸರಿಯಲ್ಲ. ಅದರಂತೆ ಮುಟೇಷನ ನಂ. 53-1987-88 ರ ಪ್ರಕಾರ ತಿಪ್ಪಣ್ಣನ ಸೊಸೆ ಸಿದ್ದಮ್ಮ ಗಂಡ ಪರ್ವತರೆಡ್ಡಿ ಹೆಸರಿಗೆ ಮುಟೇಷನ ಆಯಿತು ಎಂದರೆ ಸರಿಯಲ್ಲ. ಅದರಲ್ಲಿ ಸಿದ್ದಮ್ಮಳಿಗೆ ಮಾರಾಟ ಮಾಡಿದ್ದಾರೆ ಎಂದು ಉಲ್ಲೇಖ ಇದೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಪ್ರಚೂರ ಪಡಿಸಿ ಮುಟೇಷನ ಮಾಡಿದ್ದರು ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿ ದ್ಯಾವಪ್ಪ AC ರವರ ನ್ಯಾಯಾಲಯದಲ್ಲಿ Appeal No. 40/1988-89 ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅಪೀಲು ವಜಾ ಆಯಿತು ಎಂದರೆ ಸರಿಯಲ್ಲ. ತದನಂತರ ಅದರ ವಿರುದ್ದ

ಇಲ್ಲಿಯವರೆಗೆ ಯಾರೂ ಕೂಡ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಪೀಲು ಸಲ್ಲಿಸಿದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ಯಾವುದೇ ಅಪೀಲು ಸಲ್ಲಿಸದೆ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುನ್ನು ಪರ್ವತರೆಡ್ಡಿ ಮತ್ತು ಆತನ ಸಹೋದರರು 2003 ರಲ್ಲಿ ಭಾಗ ಮಾಡಿಕೊಂಡು ಎಂದರೆ ಸರಿಯಲ್ಲ. ತದನಂತರ ಅವರ ಮಕ್ಕಳು ಅವರ ಭಾಗದ ಸ್ವತ್ತುಗಳನ್ನು ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸಿದ್ದಮ್ಮ ತನ್ನ ಭಾಗದ ಜಮೀನನ್ನು ತನ್ನ ಮಗಳಾದ ಮಲ್ಲಮ್ಮಳ ಹೆಸರಿಗೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತುಳುಜಾ ರೆಡ್ಡಿ ಮತ್ತು ಶಕುಂತಲಾ ತಮ್ಮ ಭಾಗದ ಜಮೀನನ್ನು 5 ಮತ್ತು 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುಂಬೈಗೆ ದುಡಿಯಲು ಹೋದವರು ಗ್ರಾಮಕ್ಕೆ ಬಂದು ಹೋಗು ಮಾಡುತ್ತಾರೆ ಎಂದರೆ ಸರಿ. ಬಂದಾಗ ಜಮೀನಿನ ಪಹಣಿ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನನ್ನ ತಂದೆಗೆ ತಿಪ್ಪಣ್ಣನ ಕುಟುಂಬದ ಹೆಸರಿಗೆ ಜಮೀನು ಆಗಿರುವುದು ಗೊತ್ತಿತ್ತು ಎಂದರೆ ಸರಿಯಲ್ಲ. ದ್ಯಾವಪ್ಪ ಅಪೀಲು ಸಲ್ಲಿಸಿದ್ದು ಕೂಡ ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಪಕ್ಕದ ಬೆನಕನಳ್ಳಿ ಗ್ರಾಮದಲ್ಲಿ ಸಿಮೇಂಟ ಕಂಪನಿ ಆರಂಭಗೊಡಿದ್ದೇ ಎಂದರೆ ಸರಿ. ಅದಕ್ಷ 2006 ರಿಂದ ಜಮೀನು ಖರೀದಿ ಪಡೆಯುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕಿಂತ ಮುಂಚೆ ನಾವು ಕೇಸ ಹಾಕಿದ್ದೇವೆ ಎಂದು ಹೇಳುತ್ತಾರೆ. ಸದರಿ ಕೇಸ ಇದೆ ಕೇಸ ಆಗಿದೆ. ಫ್ಯಾಕ್ಟರಿ ಆರಂಭಗೊಂಡ ನಂತರ ನಮ್ಮ ಗ್ರಾಮದ ಜಮೀನುಗಳ ಬೆಲೆ ಹೆಚ್ಚಾಗಿದ್ದು ಕಾರಣ ಹೇಗಾದರು ಮಾಡಿ ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ಒಬ್ಬನೇ ಇದ್ದ ಎಂದರೆ ಸರಿ. ಸದರಿ ಸಾಬಣ್ಣನಿಗೆ ಇಬ್ಬರು ಹೆಂಡತಿಯರು, ನನ್ನ ತಂದೆ 2 ನೇ ಹೆಂಡತಿ ಮಗ ಇದ್ದರೂ ಕೂಡ ಅಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆ ಪಕ್ಕದ ಕಾಶಪ್ಪ ಹೊನ್ನಾಯಕನ ಮನೆ ಮತ್ತು ನಮ್ಮ ಮನೆ ಒಂದೇ ಎಂದರೆ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕನಿಗೆ ಸೇರಿದ ಮನೆ ಎಂದರೆ ಸರಿಯಲ್ಲ. 2 ಮನೆ ಒಂದೆ ಇದ್ದರು ಒಂದಕ್ಕೊಂದು ಸಂಬಂಧ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪ್ರತಿವಾದ

ಪತ್ರ ಸಲ್ಲಿಸಿದ ನಂತರ ನಾನು Rejoinder ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮಗೂ ಮತ್ತು ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕನಿಗೆ ಸಂಬಂಧ ಇಲ್ಲ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 738 ಕಾಶಮ್ಮ ಗಂಡ ಕಾಶಪ್ಪ ಮತ್ತು ದೇವಪ್ಪ ತಂದೆ ಸಾಬಣ್ಣ ರವರ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.